ವಿಕೋಪಗಳನ್ನು ಎದುರಿಸಿದರೂ ಉದ್ಯಮರಂಗದಲ್ಲಿ ಅಪೂರ್ವವಾದದ್ದನ್ನು ಸಾಧಿಸಿದವರು. ಜಪಾನಿನ ಮುಕ್ಕಾಲು ಭಾಗ ಕಾಡು, ಗುಡ್ಡ, ಬೆಟ್ಟಗಳಿಂದ ಕೂಡಿದ್ದು, ಜನವಸತಿಗಾಗಲೀ, ಬೇಸಾಯಕ್ಕಾಗಲೀ, ಕೈಗಾರಿಕೆಗಾಗಲೀ ಯೋಗ್ಯವಾಗಿಲ್ಲ. ಜಪಾನಿಗೆ ಎದುರಾಗುವ ಪ್ರಾಕೃತಿಕ ತೊಂದರೆಗಳೂ ಒಂದೆರಡಲ್ಲ. ಜಪಾನ್ ಇರುವುದೇ ಜ್ವಾಲಾಮುಖಿಯ ಪ್ರಾಂತ್ಯದಲ್ಲಿ. ಈ ದೇಶದಲ್ಲಿ ಸುಮಾರು 108 ಜ್ವಾಲಾಮುಖಿಗಳಿವೆ. ಇತ್ತೀಚೆಗೆ ಇನ್ನೂ ಹಲವು ಜ್ವಾಲಮುಖಿಗಳು ಸೃಷ್ಟಿಯಾಗಿವೆಯಂತೆ.

ಪದೇ ಪದೇ ಭೂಕಂಪ ಸಂಭವಿಸುವ ದೇಶ ಜಪಾನ್. 1923ರಲ್ಲಿ ನಡೆದ ಟೋಕಿಯೊ ಭೂಕಂಪದಲ್ಲಿ ಒಂದು ಲಕ್ಷಕ್ಕೂ ಅಧಿಕ ಜನರು ಮಡಿದದ್ದು ದಾಖಲೆ. 2011 ರ ಭೂಕಂಪದಿಂದಾಗಿ ಅತೀ ದೊಡ್ಡ 'ಸುನಾಮಿ'ಯೇ ಬಂತು. ಆಗಾಗ ಕಾಣಿಸಿಕೊಳ್ಳುವ ಜ್ವಾಲಾಮುಖಿ, ಭೂಕಂಪ ಮತ್ತು ಸುನಾಮಿಯಿಂದಾಗಿ ಅತೀ ಹೆಚ್ಚು ನೈಸರ್ಗಿಕ ವಿಕೋಪಕ್ಕೆ ಒಳಗಾಗುವ ದೇಶಗಳಲ್ಲಿ ಒಂದು ಎಂದು ಜಪಾನನ್ನು ವರ್ಗೀಕರಿಸಲಾಗಿದೆ.

ಇಷ್ಟೆಲ್ಲಾ ಪ್ರತಿಕೂಲವಿದ್ದರೂ ಜಪಾನ್ ವಿಶ್ವದ ಅತೀ ಹೆಚ್ಚು ವಿದ್ಯಾವಂತರಿರುವ ದೇಶ. ಅತೀ ಹೆಚ್ಚು ನುರಿತ ಉದ್ಯೋಗಿಗಳಿರುವ ದೇಶ. ಜಗತ್ತಿನ ಅತ್ಯಂತ ಅಭಿವೃದ್ಧಿ ಹೊಂದಿದ ದೇಶಗಳಲ್ಲೊಂದು. ಅಲ್ಲಿನ ಜನರ ಜೀವನದ ಮಟ್ಟವೂ ಸಾಕಷ್ಟು ಎತ್ತರದಲ್ಲಿದೆ. ಬಹುಸಂಖ್ಯೆಯ ಶತಾಯುಷಿಗಳಿರುವ ದೇಶದ ಪಟ್ಟಿಯಲ್ಲೂ ಜಪಾನ್ ಮುಂಚೂಣಿಯಲ್ಲಿದೆ. ಶಿಶು ಮರಣವಂತೂ ಜಪಾನ್‌ನಲ್ಲಿ ಅಪರೂಪವೆಂದೇ ಹೇಳಬಹುದು. ಈ ಲೇಖನ ಬರೆಯುತ್ತಿರಬೇಕಾದರೆ, ಪತ್ರಿಕೆಗಳಲ್ಲಿ ಒಂದು ಸುದ್ದಿ ಕಾಣಿಸಿತು– ವಿಶ್ವದ ಅತೀ ಹೆಚ್ಚು ವಯಸ್ಸಾದ (117 ವರ್ಷ) ವ್ಯಕ್ತಿಯೊಬ್ಬ ಜಪಾನಿನಲ್ಲಿ ತೀರಿಕೊಂಡ ಸುದ್ದಿಯದು!

## ಶಿಸ್ತು ಮತ್ತು ವಿನಯ

ತಲೆ ಮತ್ತು ಮೇಲ್ಭಾಗದ ಬೆನ್ನನ್ನು ಬಗ್ಗಿಸಿ ಅತಿಥಿಗಳನ್ನು ಸ್ವಾಗತಿಸುವುದು ಜಪಾನಿಗರ ಕ್ರಮ. ಜಪಾನಿಗರು ಅತ್ಯಂತ ಶಿಸ್ತುಬದ್ಧ ಜೀವನ ನಡೆಸುವವರು. ನಡೆನುಡಿಗಳಲ್ಲಿ ನಾಜೂಕುತನ, ನಮ್ರತೆ ಮತ್ತು ಘನತೆ ಎದ್ದು ಕಾಣುತ್ತದೆ. ಅಂತಹದೇ ನಡವಳಿಕೆಯನ್ನು ನಮ್ಮಿಂದಲೂ ಅಪೇಕ್ಷಿಸುತ್ತಾರೆ. ಅವರ ಘನತೆಗೆ ಧಕ್ಕೆ ತರುವ ಇತರರ ನಡವಳಿಕೆಯನ್ನು ನಯವಾಗಿಯೇ ತಿರಸ್ಕರಿಸುತ್ತಾರೆ. ಅವರ ಊಟದ ಆಹ್ವಾನವನ್ನು ತಿರಸ್ಕರಿಸಿದರೂ ಅಪಮಾನವಾಯಿತೆಂಬಂತೆ ಭಾವಿಸುವವರು. ಸಾರ್ವಜನಿಕ ಸ್ಥಳಗಳಲ್ಲಿ ಹೆಚ್ಚು ಮಾತಿಲ್ಲ, ಧಾವಂತವಿಲ್ಲ, ಕಿರಿಚಾಡುವ ಮಕ್ಕಳಿಲ್ಲ. ಮೊಬೈಲಿನಲ್ಲಿ ಗಟ್ಟಿಯಾಗಿ ಮಾತಾಡಿಕೊಂಡು ನಡೆದಾಡುವವರೂ ಅಲ್ಲಿ ಕಾಣಸಿಗುವುದಿಲ್ಲ. ಒಂದು ಮುಗುಳ್ನಗೆ ಅಷ್ಟೆ!

ಅವರೆದುರು ನಾವು ಭಾರತೀಯರು ಸ್ವಲ್ಪ ಒರಟರೇನೊ. ಎಲ್ಲೆಲ್ಲೂ ಶಿಸ್ತು, ಮುಖಕ್ಕೆ ಮಾಸ್ಕ್ ಕಟ್ಟಿಕೊಂಡೇ ಓಡಾಡುವವರು ಹೆಚ್ಚು. ಬಸ್ಸು, ಟ್ರಾಮ್, ರೈಲುಗಳಲ್ಲಿ ಸಾರ್ವಜನಿಕ ನಡವಳಿಕೆಯ ಕುರಿತ ನೋಟಿಸ್‌ಗಳನ್ನು ಕಾಣಬಹುದು. ಸಾರ್ವಜನಿಕ ಸ್ಥಳಗಳಲ್ಲಿ 'ಕಸದ ಬುಟ್ಟಿ' ಬೇಕೆಂದರೂ ಸಿಗುವುದು ಕಷ್ಟವೇ. ಕಸವನ್ನು ನಿಮ್ಮ ಮನೆಗೇ ಕೊಂಡೊಯ್ಯಬೇಕು! ರೈಲು, ಬಸ್ಸುಗಳು ಕೆಲವು ಸೆಕೆಂಡಿಗಿಂತ ತಡವಾಗಿ ಬಂದ ಉದಾಹರಣೆಗಳೇ ಇಲ್ಲ.

ಜಪಾನಿಗರ ಸಾಂಪ್ರದಾಯಿಕ ಉಡುಗೆ 'ಕಿಮೋನಾ'. ಹಿಂದೆ ಎಲ್ಲ ಸಂದರ್ಭಗಳಲ್ಲೂ ಧರಿಸುತ್ತಿದ್ದರು. ಆದರೀಗ ವಿಶೇಷ ದಿನಗಳಲ್ಲಿ, ಇಲ್ಲವೇ ಮಂದಿರಕ್ಕೆ ಹೋಗುವಾಗ ಮಾತ್ರ ಕಿಮೋನವನ್ನು ಧರಿಸುತ್ತಾರೆ. ಪಾಶ್ಚಿಮಾತ್ಯರ ಉಡುಗೆಗಳು ಜನಪ್ರಿಯವಾಗಿದ್ದರೂ ಮೈ ಮುಚ್ಚುವಂತಹ ಉಡುಪಿನಲ್ಲೇ ಇರುತ್ತಾರೆ. ಅಲ್ಲಲ್ಲಿ ಗಿಡ್ಡ ಸ್ಕರ್ಟುಗಳೂ ಕಾಣಸುತ್ತವೆ.

ಕೆಲಸದಲ್ಲಿ ಜಪಾನಿಗರು ತೋರಿಸುವ ಶ್ರದ್ಧೆ, ಅಚ್ಚುಕಟ್ಟುತನದ ಬಗ್ಗೆ ಎರಡು ಮಾತಿಲ್ಲ. ಶೇಕಡಾ 90ರಷ್ಟು ಜಪಾನಿ ಜನಸಂಖ್ಯೆ ನಗರಗಳಲ್ಲಿ ಉದ್ಯೋಗ ಹಿಡಿದಿದ್ದು, ಶೇಕಡಾ 5ರಷ್ಟು ಜನರು ಮಾತ್ರ ವ್ಯವಸಾಯದಲ್ಲಿ ತೊಡಗಿಕೊಂಡಿದ್ದಾರೆ. ಎಲ್ಲರ ಮನೆಯಲ್ಲೂ ಕಾರುಗಳಿದ್ದರೂ ಆಫೀಸು ಕೆಲಸಕ್ಕೆ ಸಾರ್ವಜನಿಕ ಸಾರಿಗೆಯನ್ನೇ ಬಳಸುವುದು ಕಂಡು ಬರುತ್ತದೆ. ಜಪಾನಿನ ರಸ್ತೆ ಬದಿಯಲ್ಲಿರುವ ಚರಂಡಿಯ ಮುಚ್ಚಳ (ಮ್ಯಾನ್‌ಹೋಲ್ ಕವರ್)ದ ಮೇಲೂ ಅಂದ ಚೆಂದದ ವಿನ್ಯಾಸಗಳಿವೆ! ಇದು ಅವರ ಸ್ವಚ್ಛತೆಯ ಪರಿಕಲ್ಪನೆಗೊಂದು ಉದಾಹರಣೆ.



ಟೊದೈಜಿ ಮಂದಿರ

## ಧರ್ಮಭೀರು ಜನರು

ಜಪಾನಿಗರು ಬೌದ್ಧ ಇಲ್ಲವೆ ಶಿಂತೋ ಧರ್ಮದ ಅನುಯಾಯಿಗಳು. ಎರಡೂ ಧರ್ಮವನ್ನು ಅನುಸರಿಸುವ ಜನರೂ ಇಲ್ಲದಿಲ್ಲ. ಭಾರತದಲ್ಲೇ ಹುಟ್ಟಿದ ಬೌದ್ಧ ಧರ್ಮದ ಬಗ್ಗೆ ಎಲ್ಲರಿಗೂ ಗೊತ್ತಿರುವಂತಹದ್ದೇ. ಎಲ್ಲಾ ವಸ್ತುಗಳಲ್ಲೂ ಆತ್ಮವಿದೆಯೆಂದು ನಂಬುವವರು ಶಿಂತೋ ಧರ್ಮದವರು. ಅಶುದ್ಧ ಅಥವ ತಪ್ಪು ಕಾರ್ಯಗಳನ್ನು ಶುದ್ಧ ಮಾಡಿ ಸರಿಪಡಿಸಿಕೊಳ್ಳಬೇಕು ಎನ್ನುತ್ತಾರೆ ಇವರು. ಶಿಂತೋ ಧರ್ಮದ ಪೂಜಾರಿಗಳು ಆಗಾಗ ಶುದ್ಧ ಮಾಡುವ ಕಾರ್ಯಗಳಲ್ಲಿ ತೊಡಗಿಕೊಂಡಿರುತ್ತಾರೆ. ಶಿಂತೋ ಧರ್ಮದಲ್ಲಿ ಹೆಚ್ಚು ಕಟ್ಟುಪಾಡುಗಳಿಲ್ಲ.

ಜಪಾನಿಗರ ಉದ್ಯಮಶೀಲತೆ ವಿಶ್ವಪ್ರಸಿದ್ಧ. ವಿಶ್ವದ ಅತೀ ದೊಡ್ಡ ಅಟೊಮೊಬೈಲ್ ಕಂಪೆನಿಯಾದ 'ಟೋಯೋಟಾ'ದ ತವರೂರು ಜಪಾನ್. ವಸ್ತುಗಳ ಉತ್ತಮ ಗುಣಮಟ್ಟ ಕಾಪಾಡಲು ಹೆಣಗಾಡುವ ಜಪಾನ್, ಸಹಜವಾಗಿ ವಸ್ತುಗಳ ಬೆಲೆಯನ್ನೂ ಅಧಿಕವಾಗಿಟ್ಟಿದೆ. ಇತ್ತೀಚೆಗೆ ವಿಶ್ವ ಮಾರುಕಟ್ಟೆಯಲ್ಲಿ ಜಪಾನಿನ ಗುಣಮಟ್ಟದ ವಸ್ತುಗಳಿಗೆ ಚೀನಾ, ಕೊರಿಯಾ, ಥಾಯ್ಲೆಂಡಿನಿಂದ ಬರುವ ಕಡಿಮೆ ಬೆಲೆಯ ವಸ್ತುಗಳು ತಲೆನೋವಾಗಿದ್ದು ತೀವ್ರ ಸ್ಪರ್ಧೆ ಒಡ್ಡುತ್ತಿವೆ. ದೇಶದ ಆರ್ಥಿಕತೆಗೆ ಸಾಕಷ್ಟು ಕಷ್ಟಗಳು ಎದುರಾಗಿದ್ದು, ಎಲ್ಲ ಇದ್ದರೂ ಜಪಾನಿಗರು ಸಂತೋಷವಾಗಿಲ್ಲ ಎನ್ನುವ ಪಿಸುಮಾತುಗಳೂ ಕೇಳಿ ಬರುತ್ತಿವೆ. ಏರುತ್ತಿರುವ ಖರ್ಚಿಗೆ ಹೆದರಿ ಇತ್ತೀಚೆಗೆ ಯುವಜನರು ಮದುವೆ ಮಾಡಿಕೊಳ್ಳಲು ಹಿಂದೇಟು ಹಾಕುತ್ತಿದ್ದಾರಂತೆ!

ಈಗಿನ ಜನಾಂಗಕ್ಕೆ ಬೇಸಾಯ ಇಷ್ಟವಿಲ್ಲದ ಕಸುಬು, ಬೇಸಾಯಕ್ಕಾಗಿ ಯೋಗ್ಯವಾದ ಜಾಗವೂ ಕಡಿಮೆ. ಹೆಚ್ಚಾಗಿ ಹೊಲಗಳನ್ನು ಮಹಡಿಯ ರೀತಿಯಲ್ಲಿ ಮಾಡಿ ಬೇಸಾಯ ಮಾಡುತ್ತಿದ್ದಾರೆ. ಭತ್ತವೇ ಮುಖ್ಯ. ಹೆಚ್ಚು ಬೆಳೆ ಬೆಳೆದರೂ ಜಪಾನ್ ಅತೀ ಹೆಚ್ಚು ಭತ್ತವನ್ನು ಆಮದು ಮಾಡಿಕೊಳ್ಳುತ್ತಿದೆ.

ದ್ವೀಪಗಳ ದೇಶವಾದ್ದರಿಂದ ಜಪಾನ್ ನಲ್ಲಿ ಸಹಜವಾಗಿ ಮೀನುಗಾರಿಕೆ ಮುಖ್ಯವಾದ ಕಸುಬು. ಮೀನುಗಾರಿಕೆಗೋಸ್ಕರ ನೌಕಾಪಡೆಯೂ ಇದೆ! ಇದರಿಂದಾಗಿ ಸಾಗರದಲ್ಲಿ ಉತ್ತಮ ಜಾತಿಯ ಮೀನುಗಳಲ್ಲಿ ಒಂದಾದ 'ಟುನಾ' ಕಣ್ಮರೆಯಾಗುತ್ತಿವೆ ಎಂದು ದೂರುತ್ತಿದ್ದಾರೆ ಅಕ್ಕಪಕ್ಕದ ದೇಶದವರು.

ಜಪಾನಿನ ಹವಾಮಾನ ವೈಪರೀತ್ಯ ಗಮನ ಸೆಳೆಯುವಂತಿದೆ. ಉತ್ತರ ಮತ್ತು ದಕ್ಷಿಣಕ್ಕೆ ಹವಾಮಾನದಲ್ಲಿ ಸಾಕಷ್ಟು ವ್ಯತ್ಯಾಸವಿದೆ. ಸರಾಸರಿ ತೆಗೆದುಕೊಂಡರೆ ಚಳಿಗಾಲದಲ್ಲಿ ಸುಮಾರು ಉಷ್ಣತೆ 5 ಡಿಗ್ರಿ ಇದ್ದರೆ, ಬೇಸಿಗೆ